144ನೇ ಅಧಿವೇಶನದಲ್ಲಿ ದಿ: 23/9/21ರಂದು
ನಿ-330, ಕ್ರ/19 ಸದನದಲ್ಲಿ ಚರ್ಚೆಯಾಯಿತು

ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾದ
ಶ್ರೀಎಸ್.ಆರ್.ಪಾಟೀಲ್ ಇವರು ನಿಯಮ-330ರಡಿಯಲ್ಲಿ ನೀಡಿರುವ ಸೂಚನೆಗೆ ಉತ್ತರಿಸುವ ಬಗ್ಗೆ.

**ವಿಷಯ:**

ಉತ್ತರ ಕರ್ನಾಟಕದಲ್ಲಿ ಇರುವ ಅನೇಕ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿ ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಬಹುತೇಕ ಖಾಸಗಿ ಸಕ್ಕರೆ ಕಾರ್ಖಾನೆಗಳು ಎನ್.ಸಿ.ಎಲ್.ಟಿ ಹೋಗುತ್ತಿದ್ದು ಅದೇರೀತಿ ಸಹಕಾರಿ ಕ್ಷೇತ್ರದಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ಲೀಸ್ ಮೇಲೆ ಕೊಡುವ ಪದ್ಧತಿ ಉದ್ಭವಿಸಿದೆ. ಉತ್ತರ ಕರ್ನಾಟಕದ ಬಹುತೇಕ ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವುದನ್ನು ಸ್ಥಗಿತಗೊಳಿಸುವಂತ ಭಯಉಂಟಾಗಿದೆ. ಸರ್ಕಾರಿ ಕಾರ್ಖಾನೆಗೆ ಆರ್ಥಿಕ ನೆರವು ನೀಡಿದಂತಹ ಸಹಕಾರಿ ಬ್ಯಾಂಕ್‌ಗಳು ಸಹ ಮುಳುಗುವ ಸ್ಥಿತಿ ಉಂಟಾಗಿದ್ದು, ಉತ್ತರ ಕರ್ನಾಟಕದ ಕೋಟ್ಯಾಂತರ ರೈತರು/ ಕಬ್ಬು ಬೆಳೆಗಾರರು ಬೀದಿಗೆ ಬರುವಂತಹ ಪರಿಸ್ಥಿತಿ ಉಂಟಾಗಿದೆ.ಇಂತಹ ಸಂದರ್ಭದಲ್ಲಿ ಸರ್ಕಾರ ಮಧ್ಯಸ್ಥಿಕೆ ವಹಿಸಿ ಸಕ್ಕರೆ ಕಾರ್ಖಾನೆಗಳನ್ನು ಕೋಟ್ಯಾಂತರ ಕಬ್ಬು ಬೆಳೆಗಾರರನ್ನು ಹಾಗೂ ಸಹಕಾರಿ ಬ್ಯಾಂಕ್‌ಗಳನ್ನು ಉಳಿಸಲು ಜರೂರಾಗಿ ಮಾರ್ಗೋಪಾಯವನ್ನು ಕಂಡುಕೊಳ್ಳಬೇಕಾಗಿರುವ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

**ಸರ್ಕಾರದ ಉತ್ತರ:**

ರಾಜ್ಯದಲ್ಲಿಒಟ್ಟು 87 ನೋಂದಾಯಿತ ಸಕ್ಕರೆ ಕಾರ್ಖಾನೆಗಳಿದ್ದು, ಇವುಗಳ ಪೈಕಿ 65 ಸಕ್ಕರೆ ಕಾರ್ಖಾನೆಗಳು ಕಾರ್ಯನಿರತವಾಗಿವೆ. ವಲಯವಾರು ವಿವರ ಈ ಕೆಳಕಂಡಂತಿದೆ.

| ಕ್ರ ಸಂ. | ವಲಯ | ಕಾರ್ಯನಿರತ | ಸ್ಥಗಿತ | ಸಮಾಪನೆ | ಒಟ್ಟು |
|---|---|---|---|---|---|
| 1 | ಸಾರ್ವಜನಿಕ ವಲಯ | – | 02 | – | 02 |
| 2 | ಜಂಟಿ ವಲಯ | – | – | 01 | 01 |
| 3 | ಸಹಕಾರಿ ವಲಯ | 13 | 05 | 04 | 22 |
| 4 | ಸಹಕಾರಿ ವಲಯ (ಗುತ್ತಿಗೆ) | 08 | 0 | – | 08 |
| 5 | ಖಾಸಗಿ ವಲಯ | 44 | 10 | – | 54 |
| | **ಒಟ್ಟು** | **65** | **17** | **05** | **87** |

ರಾಜ್ಯದ ಬಹುತೇಕ ಖಾಸಗಿ ಮತ್ತು ಸಹಕಾರಿ ವಲಯದ ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಸಕ್ಕರೆ ಉತ್ಪಾದನಾ ವೆಚ್ಚ ಹೆಚ್ಚಾಗಿರುವುದು, ಬ್ಯಾಂಕುಗಳ ಬಡ್ಡಿದರದ ಹೊರೆ, ಮಾರುಕಟ್ಟೆಯಲ್ಲಿ ಸಕ್ಕರೆ ಮತ್ತು ಉಪ ಉತ್ಪನ್ನಗಳ ಬೆಲೆಗಳಲ್ಲಿ ಹೆಚ್ಚಳವಾಗದಿರುವುದು, ಆಡಳಿತಾತ್ಮಕ ವೆಚ್ಚಗಳು, ಬೇಡಿಕೆ ಮತ್ತು ಪೂರೈಕೆಯಲ್ಲಿನ ವ್ಯತ್ಯಾಸ ಇತ್ಯಾದಿಗಳು ಸಕ್ಕರೆ ಕಾರ್ಖಾನೆಗಳು ನಷ್ಟ ಹೊಂದಲು ಪ್ರಮುಖ ಕಾರಣವಾಗಿರುತ್ತದೆ.

ಲಭ್ಯವಿರುವ ಮಾಹಿತಿಯ ಪ್ರಕಾರ ಕಾರ್ಪೊರೇಟ್ ವಿವಾದಗಳ ಅಡಿಯಲ್ಲಿ ಬಾದಾಮಿ ಶುಗರ್ಸ್ ಲಿ., ಬಾದಾಮಿ, ಬಾಗಲಕೋಟೆ ಜಿಲ್ಲೆ ಮತ್ತು ಕೇದಾರನಾಥ್ ಶುಗರ್ಸ್ ಲಿ., ಕೆರಕಲಮಟ್ಟಿ, ಬಾಗಲಕೋಟೆ ಜಿಲ್ಲೆ ಈ ಎರಡೂ ಕಾರ್ಖಾನೆಗಳು ನ್ಯಾಷನಲ್ ಕಂಪನಿ ಲಾ ಟ್ರಿಬ್ಯುನಲ್ (ಎನ್.ಸಿ.ಎಲ್.ಟಿ)ಗೆ ಹೋಗಿದ್ದು, ಎನ್.ಸಿ.ಎಲ್.ಟಿ. ತೀರ್ಪಿನಂತೆ ಖಾಸಗಿಯವರು ಈ ಕಾರ್ಖಾನೆಗಳನ್ನು ಹರಾಜಿನಲ್ಲಿ ಖರೀದಿಸಿರುತ್ತಾರೆ. ಈ ಕಾರ್ಖಾನೆಗಳಿಗೆ ಸಾಲ ನೀಡಿರುವ ಹಣಕಾಸು ಸಂಸ್ಥೆಗಳು/ ಬ್ಯಾಂಕುಗಳು ಸಾಲ ವಸೂಲಾತಿ ಸಂಬಂಧ ಎನ್.ಸಿ.ಎಲ್.ಟಿ.ಯಲ್ಲಿ ವ್ಯಾಜ್ಯಗಳನ್ನು ದಾಖಲಿಸಿದ್ದವು. ಇದರ ಹೊರತಾಗಿ ಇನ್ಯಾವುದೇ ಕಾರ್ಖಾನೆಗಳ ವ್ಯಾಜ್ಯಗಳು ಎನ್.ಸಿ.ಎಲ್.ಟಿ.ಯಲ್ಲಿ ದಾಖಲಾಗಿರುವ ವಿಷಯ ಗಮನಕ್ಕೆ ಬಂದಿರುವುದಿಲ್ಲ.

.......2

ರಾಜ್ಯದಲ್ಲಿ ಕೆಲವೊಂದು ಸಹಕಾರಿ ಸಕ್ಕರೆ ಕಾರ್ಖಾನೆಗಳು ದುಡಿಯುವ ಬಂಡವಾಳದ ಕೊರತೆ ಮತ್ತು ಆರ್ಥಿಕ ದುಸ್ಥಿತಿಯಿಂದಾಗಿ ಸ್ಥಗಿತಗೊಂಡಿದ್ದವು. ಇಂತಹ ಸಕ್ಕರೆ ಕಾರ್ಖಾನೆಗಳನ್ನು ಕಬ್ಬು ಬೆಳೆಗಾರ ರೈತರ ಮತ್ತು ಕಾರ್ಮಿಕರ ಹಿತದೃಷ್ಟಿಯಿಂದ ಪುನ:ಶ್ಚೇತನಗೊಳಿಸಲು ತೀರ್ಮಾನಿಸಲಾಗಿತ್ತು. ಅದರಂತೆ ಈವರೆವಿಗೂ ಈ ಕೆಳಕಂಡ ಒಟ್ಟು 8 ಸಕ್ಕರೆ ಕಾರ್ಖಾನೆಗಳನ್ನು ಖಾಸಗಿಯವರಿಗೆ ದೀರ್ಘಾವಧಿಯ ಮೇಲೆ ಗುತ್ತಿಗೆ ನೀಡುವುದರ ಮೂಲಕ ಪುನ:ಶ್ಚೇನಗೊಳಿಸಿರುತ್ತದೆ. ಇದರಿಂದಾಗಿ, ಕಬ್ಬು ಬೆಳೆಗಾರರು ಬೆಳೆದಂತಹ ಕಬ್ಬನ್ನು ಸಕಾಲದಲ್ಲಿ ಅರೆದು, ಕಬ್ಬಿನ ಬಿಲ್ಲು ಹಾಗೂ ಕಾರ್ಮಿಕರ ವೇತನ ಮತ್ತು ಭತ್ಯೆಗಳನ್ನು ಪಾವತಿಸಲು ಸಾಧ್ಯವಾಗಿರುತ್ತದೆ.

| ಕ್ರಸಂ. | ಕಾರ್ಖಾನೆಗಳ ಹೆಸರು ಮತ್ತು ವಿಳಾಸ |
|---|---|
| | **ಸಹಕಾರಿ ವಲಯ – ಕಾರ್ಯನಿರತ (ಗುತ್ತಿಗೆ)** |
| 1 | ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಗೂರು, ಹಾವೇರಿ ತಾಲ್ಲೂಕು ಮತ್ತು ಹಾವೇರಿ ಜಿಲ್ಲೆ |
| 2 | ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕುಪ್ಪಟಗಿರಿ, ಖಾನಾಪುರ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 3 | ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭೂಸನೂರು,ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ |
| 4 | ಧನಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,ಖಾನ್‌ಪೇಟೆ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ |
| 5 | ರಾಯಬಾಗ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,ಮೇಕಳಿ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ. |
| 6 | ಮೃಢಗಿರಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗಂಗಾಪುರ, ಮಂಡರಗಿ, ತಾಲ್ಲೂಕು, ಗದಗ್ ಜಿಲ್ಲೆ |
| 7 | ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ |
| 8 | ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,ಪಾಂಡವಪುರ, ಮಂಡ್ಯಜಿಲ್ಲೆ. |

ಮುಂದುವರಿದು, ಶ್ರೀ ಶ್ರೀರಾಮ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಕೆ.ಆರ್.ನಗರ, ಮೈಸೂರು ಜಿಲ್ಲೆ, ರೈತರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮುಧೋಳ, ಬಾಗಲಕೋಟೆ ಜಿಲ್ಲೆ ಇವುಗಳನ್ನು ಸಹ ಗುತ್ತಿಗೆ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ರಾಜ್ಯದ ಉತ್ತರ ಭಾಗದಲ್ಲಿ ಪ್ರಮುಖವಾಗಿ ಬೆಳಗಾವಿ, ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ ಕಾರ್ಖಾನೆಗಳಿದ್ದು, ರಾಜ್ಯದ ಶೇ.80 ರಷ್ಟು ಸಕ್ಕರೆ ಉತ್ಪಾದನೆ ಈ 3 ಜಿಲ್ಲೆಗಳಲ್ಲಿ ಆಗುತ್ತಿದೆ. ವರ್ಷದಿಂದ ವರ್ಷಕ್ಕೆ ಹೊಸ ಸಕ್ಕರೆ ಕಾರ್ಖಾನೆಗಳ ಸ್ಥಾಪನೆ ಸಂಬಂಧ ಪ್ರಸ್ತಾವನೆಗಳು ಸಹ ಸ್ವೀಕೃತವಾಗುತ್ತಿವೆ. ಪ್ರಸ್ತುತ 2020-21ನೇ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು ದಾಖಲೆಯ ಪ್ರಮಾಣದಲ್ಲಿ ಕಬ್ಬು ನುರಿಸಿ, ಸಕ್ಕರೆ ಉತ್ಪಾದಿಸಿರುತ್ತವೆ. ಅಂದರೆ, ಸದರಿ ಹಂಗಾಮಿನಲ್ಲಿ 440.84 ಲಕ್ಷ ಮೆ.ಟನ್‌ಗಳಷ್ಟು ಕಬ್ಬು ಅರೆದು, 42.94 ಲಕ್ಷ ಮೆ. ಟನ್‌ಗಳಷ್ಟು ಸಕ್ಕರೆ ಉತ್ಪಾದಿಸಿರುತ್ತವೆ. ಕರ್ನಾಟಕ ರಾಜ್ಯವು ಕಬ್ಬು ಮತ್ತು ಸಕ್ಕರೆ ಉತ್ಪಾದನೆಯಲ್ಲಿ ರಾಷ್ಟ್ರಮಟ್ಟದಲ್ಲಿ ಮೂರನೇ ಸ್ಥಾನದಲ್ಲಿರುವುದನ್ನು ಗಮನಿಸಬಹುದಾಗಿದೆ. ಉತ್ತರ ಕರ್ನಾಟಕದ ಸಕ್ಕರೆ ಕಾರ್ಖಾನೆಗಳು ಪ್ರತಿ ವರ್ಷ ಅಕ್ಟೋಬರ್/ನವೆಂಬರ್ ಮಾಹೆಗಳಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸುವಂತೆಯೇ 2021-22ನೇ ಹಂಗಾಮಿನಲ್ಲಿಯೂ ಅಕ್ಟೋಬರ್/ನವೆಂಬರ್ ಮಾಹೆಗಳಲ್ಲಿ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಲಿವೆ.

.......3

ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ರಾಜ್ಯ ಸರ್ಕಾರದಿಂದ ಈವರೆವಿಗೆ ನೀಡಿರುವ ಒಟ್ಟು ಷೇರು ಬಂಡವಾಳ ರೂ.293.65 ಕೋಟಿ ಹಾಗೂ ಸಾಲ ರೂ.628.61 ಕೋಟಿ ಹೀಗೆ ಒಟ್ಟು ರೂ.922.26 ಕೋಟಿಗಳಷ್ಟು ಆರ್ಥಿಕ ನೆರವನ್ನು ನೀಡಲಾಗಿರುತ್ತದೆ.

ರಾಜ್ಯದ 10 ಸಹಕಾರಿ ಸಕ್ಕರೆ ಕಾರ್ಖಾನೆಗಳು ದುಡಿಯುವ ಬಂಡವಾಳ ಮತ್ತು ಅವಧಿ ಸಾಲದ ರೂಪದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ಗಳು ಮತ್ತು ವ್ಯವಸಾಯ ಸೇವಾ ಸಹಕಾರ ಸಂಘಗಳ ಮೂಲಕ ರೂ. 618.52 ಕೋಟಿಗಳ ಸಾಲವನ್ನು ಪಡೆದಿರುತ್ತವೆ. ಈ ಸಾಲದ ಪೈಕಿ ದಿನಾಂಕ:31.03.2021ರ ಅಂತ್ಯಕ್ಕೆ ರೂ.527.33 ಕೋಟಿಗಳಷ್ಟು ಮರುಪಾವತಿಸಲು ಬಾಕಿ ಇರುತ್ತದೆ. ಬಾಕಿ ಸಾಲದ ಪೈಕಿ ಸುಸ್ತಿ ಸಾಲ ರೂ.276.75 ಕೋಟಿಗಳಷ್ಟಿರುತ್ತದೆ. ಅಲ್ಲದೇ ರೂ.172.15 ಕೋಟಿಗಳಷ್ಟು Non performing asset (ಎನ್.ಪಿ.ಎ.) ಆಗಿರುತ್ತದೆ.

ಪ್ರಸ್ತುತ ಚಾಲ್ತಿಯಲ್ಲಿರುವ ಹಂಗಾಮಿನಲ್ಲಿ ಅಂದರೆ 2020-21ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ಕಬ್ಬು ಬಿಲ್ಲು ಮೊತ್ತ ರೂ.13402.22 ಕೋಟಿಗಳಾಗಿದ್ದು, ಈ ಪೈಕಿ ರೂ.13474.54 ಕೋಟಿಗಳಷ್ಟು ಪಾವತಿಸಿದ್ದು, ಬಾಕಿ ಮೊತ್ತ ರೂ.44.87 ಕೋಟಿಗಳಷ್ಟಿರುತ್ತದೆ. ಪಾವತಿ ಪ್ರಮಾಣವು ಶೇ.99.99 ಗಳಷ್ಟಿರುತ್ತದೆ. ಕೆಲವೊಂದು ಸಕ್ಕರೆ ಕಾರ್ಖಾನೆಗಳು ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ.ದರಕ್ಕೂ ಮೇಲ್ಪಟ್ಟು ಕಬ್ಬಿನ ಬಿಲ್ಲನ್ನು ಪಾವತಿಸಿರುತ್ತವೆ. ಬಾಕಿ ಉಳಿದಿರುವ ಕಬ್ಬು ಬಿಲ್ಲು ಮೊತ್ತದ ವಸೂಲಾತಿಗೆ ಎಲ್ಲಾ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ. ಹೀಗೆ ರೈತರು ಮತ್ತು ಕಬ್ಬು ಬೆಳೆಗಾರರಿಗೆ ಯಾವುದೇ ತೊಂದರೆಯಿಲ್ಲದಂತೆ ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತದೆ.

ರಾಜ್ಯದ 23 ಖಾಸಗಿ ಸಕ್ಕರೆ ಕಾರ್ಖಾನೆಗಳು ದುಡಿಯುವ ಬಂಡವಾಳ ಮತ್ತು ಅವಧಿ ಸಾಲದ ರೂಪದಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ಗಳು ಮತ್ತು ವ್ಯವಸಾಯ ಸೇವಾ ಸಹಕಾರ ಸಂಘಗಳ ಮೂಲಕ ರೂ. 1936.38 ಕೋಟಿಗಳ ಸಾಲವನ್ನು ಪಡೆದಿರುತ್ತವೆ. ಈ ಸಾಲದ ಪೈಕಿ ದಿನಾಂಕ:31.03.2021ರ ಅಂತ್ಯಕ್ಕೆ ರೂ.1603.70 ಕೋಟಿಗಳಷ್ಟು ಮರುಪಾವತಿಸಲು ಬಾಕಿ ಇರುತ್ತದೆ. ಬಾಕಿ ಸಾಲದ ಪೈಕಿ ಸುಸ್ತಿ ಸಾಲ ರೂ.418.42 ಕೋಟಿಗಳಷ್ಟಿರುತ್ತದೆ. ಅಲ್ಲದೇ ರೂ.389.96 ಕೋಟಿಗಳಷ್ಟು Non performing asset (ಎನ್.ಪಿ.ಎ.) ಆಗಿರುತ್ತದೆ.

ಸಹಕಾರಿ ಬ್ಯಾಂಕುಗಳು ಸಕ್ಕರೆ ಕಾರ್ಖಾನೆಗಳಿಗೆ ಸಾಲಗಳನ್ನು ನೀಡುವಾಗ ಮತ್ತು ಸಕ್ಕರೆ ಕಾರ್ಖಾನೆಗಳು ಸಾಲಗಳನ್ನು ಮರುಪಾವತಿಸುವಾಗ ರಿಸರ್ವ್ ಬ್ಯಾಂಕ್ ಆಫ್ ಇಂಡಿಯ ಮತ್ತು ನಬಾರ್ಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿದಲ್ಲಿ ಎರಡೂ ಸಂಸ್ಥೆಗಳಿಗೆ ಯಾವುದೇ ಬಾಧಕಗಳು ಉಂಟಾಗುವುದಿಲ್ಲ. ಈ ಹಿನ್ನೆಲೆಯಲ್ಲಿ, ಸಹಕಾರಿ ಬ್ಯಾಂಕ್‌ಗಳನ್ನು ಸುಸ್ಥಿತಿಗೆ ತರುವ ಸಂಬಂಧ ಸಹಕಾರಿ ಬ್ಯಾಂಕುಗಳು ಸಕ್ಕರೆ ಕಾರ್ಖಾನೆಗಳಿಗೆ ನೀಡಿರುವ ಸಾಲಗಳಿಗೆ ಪ್ರತಿಯಾಗಿ ಪಡೆದಿರುವ ಸಾಲ ಭದ್ರತೆಯ ಬಗ್ಗೆ ಹಾಗೂ ಸಹಕಾರಿ ಬ್ಯಾಂಕುಗಳು ಮತ್ತು ಸಕ್ಕರೆ ಕಾರ್ಖಾನೆಗಳ ನಡುವಿನ ಆರ್ಥಿಕ ವ್ಯವಹಾರಗಳ ಕುರಿತು ಪರಿಶೀಲನೆ ನಡೆಸಲಾಗುವುದು.

---

ಸಿಐ 278 ಸಿಓಎಫ್ 2021

(ಶಂಕರ್.ಬ. ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು.